

**ಮೇಷ್ಟು:** 'ನೀವು ಎಷ್ಟು ದುಡ್ಡು ಕೇಳ್ತಿರೊ, ಅಷ್ಟು ದುಡ್ಡು ಕೊಡ್ತೀನಿ. ದಯವಿಟ್ಟು ರಾತ್ರಿ ಹೊತ್ತು ನಮ್ಮನೆಗೆ ಬಂದು ನನ್ನ ಮಗನಿಗೆ ಪಾಠ ಮಾಡಿ ಮೇಷ್ಟೆ' ಅಂತ ಯಾಕ್ರೀ ನನ್ನ ಹತ್ರ ಅಷ್ಟೊಂದು ಬೇಡ್ಕೊಂಡಿದ್ದೀರಾ?
**ಅಪ್ಪ:** ನನ್ನ ಮಗನಿಗೆ ನಿಮ್ಮ ಪಾಠ ಕೇಳ್ತಿದ್ರೇನೆ ನಿದ್ದೆ ಬರೋದಂತೆ ಮೇಷ್ಟೆ. ಇಲ್ದೆ ಹೋದ್ರೆ ನಿದ್ದೆ ಇಲ್ಲದೆ ನರಳಾಡ್ತಾನೆ.

**ರಂಗ:** ಯಾಕೋ, ಭಿಕ್ಷೆ ಬೇಡುತ್ತಿದ್ದವನು ಈಗ ದರೋಡೆ ಮಾಡ್ತಿದ್ದೀಯಾ?
**ಗುಂಡ:** ಭಿಕ್ಷೆ ಬೇಡಿದ್ರೆ ಕಾಶಿ, ರಾಮೇಶ್ವರ ಅಂತ ಲೋಕಲ್ ಟ್ರಿಪ್ ಅಷ್ಟೇ ಮಾಡ್ಬಹುದು. ಆದ್ರೆ ಫಾರಿನ್ ಟ್ರಿಪ್ ಮಾಡಕ್ ಆಗಲ್ವಲ್ಲ ಅದ್ಕೆ.




**ಕ್ಲರ್ಕ್:** ಮನೆಯಲ್ಲಿ ಅಡುಗೆ ತಿಂಡಿ ಮಾಡೋತನಕ ನನ್ನ ಹೆಂಡ್ತಿ ಆಫೀಸಿಗೆ ಕಳಿಸಲ್ಲ ಸಾರ್, ಅದ್ಕೆ ಲೇಟ್ ಆಗ್ತಿದೆ.
**ಬಾಸ್:** ಅಡುಗೆ ತಿಂಡಿ ಜೊತೆಗೆ ಪಾತ್ರೆ ತೊಳೆದು ಬಟ್ಟೆ ಒಗೆದು ಮನೆ ಗುಡಿಸಿ ಸಾರಿಸೊ ತನಕ ನನ್ನ ಹೆಂಡ್ತಿನೂ ನನ್ನ ಆಫೀಸಿಗೆ ಕಳಿಸಲ್ಲ. ಇದ್ರ ಮುಂದೆ ನಿಮ್ದು ಯಾವ ಮಹಾ ಕೆಲ್ಸ ಸುಮ್ನೆ ನಾಳೆಯಿಂದ ಬೇಗ ಬನ್ನಿ.

**ಅಪ್ಪ:** ನೀನು ಪ್ರೀತಿಸಿದ ಹುಡುಗನಿಗೆ ಯಾವ ಕೆಲಸನೂ ಇಲ್ಲ ಅಂತೀಯಲ್ಲ. ಹೋಗ್ಲಿ, ನಾನೇ ಒಂದು ಅಂಗಡಿ ಇಟ್ಟು ಕೊಡುತ್ತೇನೆ. ಅವನಿಗೆ ಮಾರಾಟದ ಬಗ್ಗೆ ಏನಾದ್ರು ಅನುಭವ ಇದ್ಯಾ?
**ಮಗಳು:** ಹೂಂ ಕಣಪ್ಪ. ಅವ್ರ ಅಮ್ಮನ ಒಡವೆ, ಅಪ್ಪನ ಮನೆ, ತಮ್ಮನ ಬೈಕ್, ಮೊಬೈಲ್, ಕಾರು ಎಲ್ಲವನ್ನೂ ಅವ್ರಿಗೆ ಗೊತ್ತಿಲ್ಲದ ಹಾಗೆ ಮಾರಾಟ ಮಾಡಿದ ಅನುಭವ ಇದೆ.

**ಜಡ್ಜ್:** ಯಾಕ್ರೀ ಯಾವಾಗ್ಲೂ ಅವ್ರರಿವ್ರು ಬರೆದಿರೋ ಜೋಕ್ಸ್‌ಗಳನ್ನೇ, ಅಲ್ಪಸ್ವಲ್ಪ ಬದಲಾಯಿಸಿ ನಿಮ್ಮ ಹೆಸರಿನಲ್ಲಿ ಬರೆದು ಎಲ್ಲ ಪತ್ರಿಕೆಗಳಿಗೂ ಕಳುಹಿಸುತ್ತೀರಂತೆ?
**ಲೇಖಕ:** ಸ್ವಂತ ಜೋಕ್ಸ್ ಬರೆಯಕ್ಕೆ ಬಂದಿದ್ರೆ, ನಾನ್ಯಾಕೆ ಹಾಗೆ ಮಾಡ್ತಿದ್ದೆ ನೀವೇ ಹೇಳಿ ಸಾಹೇಬ್ರೆ.

**ರಂಗ:** ನೀನಿರೋದೆ ಗುಡಿಸ್ಲಲ್ಲಿ. ಕೆಲ್ಸ ಕಾರ್ಯನು ಇಲ್ಲ. ಆದ್ರೂ, 'ನೋಡ್ತಿರೊ, ಒಂದಿಲ್ಲೊಂದು ದಿನ ಆ ದೇವ್ರು ನಂಗೆ ಅರಮನೆ ಕೊಟ್ಟೆ ಕೊಡ್ತಾನೆ' ಅಂತಿರ್ತೀಯಲ್ವಾ, ಅದು ಹೇಗೆ ಸಾಧ್ಯ?
**ಗುಂಡ:** ದೇವ್ರು ನಂಗೆ ರಾಜ ಅನ್ನೋ ಹೆಸರನ್ನೇ ಕೊಟ್ಟಿರುವಾಗ ಇನ್ನು ಅರಮನೆ ಕೊಡಲ್ವೇನೊ?

**ಚಿಕ್ಕಪ್ಪ:** ಹುಡುಗ ತುಂಬಾ ಒಳ್ಳೆಯವನು. ಸಬ್ ಇನ್‌ಸ್ಪೆಕ್ಟರ್ ಕೆಲಸ ಬೇರೆ. ನೋಡೋಕೆ ಸುಂದರವಾಗಿದ್ದಾನೆ. ಆದ್ರೂ ಮದುವೆ ಆಗಲ್ಲ ಅಂತಿದ್ದೀಯಲ್ಲ ಯಾಕಮ್ಮ?
**ಹುಡುಗಿ:** ಅಪ್ಪ ಸಾಯುವಾಗ, 'ಮಗಳೆ, ಏನೇ ಆಗ್ಲಿ. ಪೊಲೀಸ್ ಸ್ಟೇಷನ್ ಮೆಟ್ಟಿಲು ಹತ್ತಿದವನನ್ನು ಮಾತ್ರ ಮದುವೆ ಆಗಬೇಡ ಅಂತ ಹೇಳಿದ್ರು'. ಅದ್ಕೆ ಚಿಕ್ಕಪ್ಪ.



ಇಲ್ಲಿ 'ಪಾರ್ಕಿಂಗ್' ಸುಲಭ. ಪಾರ್ಕಿಂಗ್ ಫೀಗೆ ಬದ್ಲು ಪೆನಾಲ್ಟಿ ಫೀ ಕಟ್ಟಿದರಾಯ್ತು ಅಷ್ಟೇ.



ಹೆಚ್ಚಿನ 'ಧಾರಾವಾಹಿ'ಗಳಲ್ಲಿ ಸ್ತ್ರೀಯರೇ ವಿಲನ್ ಅಂತ ಬಿಂಬಿಸ್ತಿದಾರೆ. ನಾವು ಪ್ರತಿಭಟಿಸ್ಬೇಕು.

**ಒಡತಿ:** ಯಾಕಪ್ಪಾ ನಮ್ಮ ಮನೆ ಮುಂದೆ ದಿನಾಲೂ ಬಂದು ತುಪ್ಪ ಕೊಡಿಯಮ್ಮ ಅಂತ ಬೇಡ್ತಿಯಾ?
**ಭಿಕ್ಷುಕ:** ಗಾದೆನೆ ಇದ್ಯಲ್ಲಮ್ಮ, ಸಾಲ ಮಾಡಿಯಾದ್ರು ತುಪ್ಪ ತಿನ್ನು ಅಂತ. ಅದ್ಕೆ ಸಾಲ ಕೇಳ್ದೆ ಯಾರು ಕೊಡ್ಲಿಲ್ಲ. ಇನ್ನೇನ್ ಮಾಡ್ಲಿ ಅಂತ ತುಪ್ಪನಾ ಭಿಕ್ಷೆ ಬೇಡ್ತಿದ್ದೀನಿ.

**ಡಾಕ್ಟರ್:** ಹೋದ ವಾರ ತಾನೇ ನನ್ನ ಹತ್ರ ಬಂದು ನಿದ್ದೆ ಬರ್ತಿಲ್ಲ ಅಂತೇಳಿ ಮಾತ್ರೆ ಬರೆಸಿಕೊಂಡು ಹೋದ್ರಲ್ಲ, ಇನ್ನೇನ್ರಿ ನಿಮ್ಮ ಪ್ರಾಬ್ಲಂ?
**ರೋಗಿ:** ಆ ಮಾತ್ರೆ ತಗೊಂಡ ಮೇಲೆ ಬೆಳಿಗ್ಗೆ, ಸಾಯಂಕಾಲ ಚೆನ್ನಾಗೇ ನಿದ್ದೆ ಬರ್ತಿದೆ. ಆದ್ರೆ ರಾತ್ರಿ ಹೊತ್ತು ಮಾತ್ರ ನಿದ್ದೆ ಬರ್ತಿಲ್ಲ.

ಸಂಗ್ರಹ: ಶರದ ಕುಲಕರ್ಣಿ, ಬೀದರ್